





ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

ನಮಗೊಬ್ಬ ಮಗನಿದ್ದಾನೆ. ಅವನಿಗೀಗ 14 ವರ್ಷ. ಆಂಗ್ಲ ಶಾಲೆಯಲ್ಲಿ ಓದುತ್ತಿದ್ದಾನೆ. ಆರನೆಯ ತರಗತಿಯವರೆಗೆ ಆಟಪಾಠಗಳೆಲ್ಲದರಲ್ಲೂ ಮುಂದಿದ್ದ. ತಂದೆ, ತಾಯಿ ಮತ್ತು ಮನೆಮಂದಿಯನ್ನು ಗೌರವದಿಂದ ನೋಡುವ ಸ್ವಭಾವವಿತ್ತು. ಯಾರಿಗೂ ತೊಂದರೆ ಕೊಡದೆ ಎಲ್ಲರೊಂದಿಗೆ ಬೆರೆತು ಒಳ್ಳೆಯವನು ಎನಿಸಿಕೊಂಡಿದ್ದ. ನಮ್ಮ ಮನೆಯವರು ಗುತ್ತಿಗೆದಾರರು. ಮನೆಯಲ್ಲಿ ಸಣ್ಣ ಮತ್ತು ದೊಡ್ಡ ವಾಹನಗಳು ಇವೆ. ಅಪ್ಪನ ಅಚ್ಚುಮೆಚ್ಚಿನ ಮಗನಾಗಿದ್ದ ಅವನು ಸಣ್ಣ ವಯಸ್ಸಿನಲ್ಲಿಯೇ ವಾಹನಗಳನ್ನು ನಡೆಸುವುದನ್ನು ಕಲಿಸಿಕೊಟ್ಟಿದ್ದರು. ಮೆಟಡಾರ್, ಆಟೋಗಳನ್ನು ಹತ್ತು ವರ್ಷದಲ್ಲೇ ಓಡಿಸುತ್ತಿದ್ದ. ಜೊತೆಗೆ ಅವುಗಳ ರಿಪೇರಿ ಮಾಡುವುದು ಗೊತ್ತಿತ್ತು. ತುಂಬಾ ಜಾಣ ಎಂದೇ ಎಲ್ಲರೂ ಹೇಳುತ್ತಿದ್ದರು. ಅವನು ಪ್ರೌಢಶಾಲೆ ಮುಟ್ಟುತ್ತಿದಂತೆಯೇ ನಡೆನುಡಿಗಳೆಲ್ಲದರಲ್ಲಿಯೂ ಭಾರೀ ಬದಲಾವಣೆ ಕಾಣಿಸಿಕೊಂಡಿದೆ. ಕಳೆದ ವರ್ಷದಿಂದಲೇ ತರಗತಿಗೆ ಸರಿಯಾಗಿ ಹಾಜರಾಗುತ್ತಿರಲಿಲ್ಲ. ಆರೋಗ್ಯದ ತೊಂದರೆ ಎಂದು ಶಾಲೆಗೆ ತಪ್ಪಿಸಿಕೊಳ್ಳುತ್ತಿದ್ದ. ಶಾಲೆಗೆ ಹೋಗದೆ ಪುಂಡ, ಪೋಕರಿ ಗುಂಪಿನಲ್ಲಿದ್ದು ಸಮಯ ಕಳೆಯುವ ಅಭ್ಯಾಸವೂ ಇತ್ತು; ಇದೀಗ ಮಿತಿಮೀರಿದೆ. ಏನಾದರೂ ಬುದ್ಧಿವಾದ ಹೇಳಿದರೆ ನಕ್ಕು ಸುಮ್ಮನಿರುತ್ತಾನೆ. ಅವನ ದುರಭ್ಯಾಸಗಳ ಬಗ್ಗೆ ಏನು ಹೇಳಿದರೂ ಕೇಳಿಸಿಕೊಳ್ಳದಂತೆ ಇದ್ದುಬಿಡುತ್ತಾನೆ. ಈಗಂತೂ ಹಣ ಕದಿಯುವುದು, ಮನೆ ವಸ್ತುಗಳನ್ನು ಕದ್ದು ಮಾರುವುದು ಹೆಚ್ಚಾಗಿದೆ. ತಡ ರಾತ್ರಿ ಮನೆಗೆ ಬರುವುದು ಸಾಮಾನ್ಯ. ಅವನಲ್ಲೀಗ ಹತ್ತಾರು ಕೆಟ್ಟ ಗುಣಗಳು ಹುಟ್ಟಿಕೊಂಡಿವೆ. ಈಗ ಶಾಲೆಯವರು ಹೊರ ಹಾಕುವುದಾಗಿ ಬೆದರಿಕೆ ಹಾಕಿದ್ದಾರೆ. ಇದರಿಂದ ಅವನಿಗೇನು ಬೇಸರವಿಲ್ಲ. ಇತ್ತೀಚೆಗೆ ಗೆಳೆಯರ ಜತೆ ಸೇರಿ ನಮ್ಮ ಲಾರಿಯನ್ನು ಯಾರಿಗೂ ಹೇಳದೆ ಬೇರೆ ಊರಿಗೆ ತೆಗೆದುಕೊಂಡು ಹೋಗಿದ್ದ. ಅದರ ಬಗ್ಗೆ ಎಷ್ಟು ಕೇಳಿದರೂ ಸರಿಯಾದ ಉತ್ತರ ನೀಡದೆ ಆ ಕಾರಣ, ಈ ಕಾರಣ ಎಂದು ತಪ್ಪಿಸಿಕೊಳ್ಳುತ್ತಾನೆ. ಅವನ ಈ ವರ್ತನೆಯಿಂದ ನಮ್ಮ ಮನೆಯವರ ಆರೋಗ್ಯ ಕೆಟ್ಟಿದೆ, ನನ್ನ ಮನಸ್ಸು ಹದಗೆಟ್ಟಿದೆ. ಇವನಿಗೆ ತಿಳಿವಳಿಕೆ ಹೇಳುವ ಕ್ರಮ ಯಾವುದು? ಯಾರ ಮೂಲಕ ಹೇಳಿಸಬೇಕು ಎನ್ನುವುದೇ ತಿಳಿಯುತ್ತಿಲ್ಲ. ಇಂತಹ ಮಕ್ಕಳಿಂದ ಏನು ಪ್ರಯೋಜನ ಎನ್ನುವಷ್ಟರ ಮಟ್ಟಿಗೆ ನಮ್ಮ ಮನಸ್ಸು ಆಗಿಬಿಟ್ಟಿದೆ. ಮಾಯಾ ಮಂತ್ರ ಮಾಡಿಸಿದೆವು, ಅಷ್ಟ ದಿಗ್ಬಂಧನ, ಪೂಜೆ, ಎಲ್ಲವನ್ನು ಮಾಡಿಸಿ ಸುಸ್ತಾಗಿದ್ದೇವೆ. ಭೂತ, ಪ್ರೇತಗಳ ಕಾಟದಿಂದ ಹೀಗಾಡುತ್ತಿದ್ದಾನೆ ಎಂದು ಮನೆಯ ಹಿರಿಯರು ಹೇಳುತ್ತಾರೆ. ಹೀಗೆಲ್ಲಾ ಮಾತುಗಳಿದ್ದರೂ, ಅವನಿಗೆ ಏನಾಗಿದೆ ಎಂದು ತಾವುಗಳಾದರೂ ತಿಳಿಸಿಕೊಡಲು ಸಾಧ್ಯವೆ? ಅವನಲ್ಲಿ ಕಾಣಿಸಿಕೊಂಡಿರುವ ಕೆಟ್ಟಗುಣಗಳು ವಯಸ್ಸಿನೊಂದಿಗೆ ಬದಲಾಗಬಲ್ಲದೆ? ಇಂತಹ ಹುಡುಗನನ್ನು ಎದುರಿಸುವುದು ಹೇಗೆ? ಅರ್ಥಮಾಡಿಕೊಂಡು ಅವನೊಂದಿಗೆ ಬದುಕುವುದು ಹೇಗೆ ಎನ್ನುವುದನ್ನು ದಯಮಾಡಿ ತಿಳಿಸಿ.

–ಅನುಪಮಾ, ಹರಿಹರ

ಪೋಷಕರು ತಮ್ಮ ಎಳೆಯ ಮಕ್ಕಳ ಸಾಮರ್ಥ್ಯಗಳ ಬಗ್ಗೆ ಅತಿಯಾದ ಉತ್ಸಾಹ, ಉತ್ತೇಜನ ಕೊಡುವುದರಿಂದ ಆಗುವ ದುರಂತಗಳ ಉದಾಹರಣೆ ಇದು. ಗೋಲಿ, ಬುಗರಿ, ಗಾಳಿಪಟದೊಂದಿಗೆ ಆಡಿ ನಲಿಯಬೇಕಾಗಿದ್ದ ಮಗುವನ್ನು ಆಟೋ, ಲಾರಿಯ ಚಾಲನೆ ಮಾಡುವುದನ್ನು ಕಲಿಸಿ ಇಂತಹದೊಂದು ಕೆಟ್ಟ ಸನ್ನಿವೇಶದಲ್ಲಿ ಸಿಕ್ಕಿಕೊಂಡಿದ್ದೀರಿ. ಮಕ್ಕಳ ಮನಸ್ಸು ಸಮ ವಯಸ್ಕರ ಜೊತೆ ವಿಕಾಸಗೊಳ್ಳುವಂತಹದ್ದು. ಹತ್ತಾರು ಚಟುವಟಿಕೆಗಳನ್ನು ಬಹಳ ಶೀಘ್ರವಾಗಿ ಕಲಿಯುವ ಸಾಮರ್ಥ್ಯವು ಅವರಲ್ಲಿದ್ದರೂ ವಯಸ್ಸಿಗೆ ಅನುಗುಣವಾಗಿ ಇರುವಂತಹದನ್ನು ಹಿರಿಯರು ಉತ್ತೇಜಿಸಬೇಕಾಗುತ್ತದೆ. ವಾಹನ ಓಡಿಸುವುದು ದೊಡ್ಡ ಕಲೆಯೂ ಅಲ್ಲ, ವಿಶೇಷ ಸಾಮರ್ಥ್ಯವು ಅಲ್ಲ. ಎಳೆಯರಲ್ಲಿ ಇಂತಹದೊಂದು ಚಟುವಟಿಕೆ ಕಾನೂನಿನ ದೃಷ್ಟಿಯಲ್ಲಿ ಅಪರಾಧ. ನಿಮ್ಮ ಹುಡುಗನಿಗೆ ಸಣ್ಣ ವಯಸ್ಸಿನಲ್ಲಿ ದೊಡ್ಡ ವಾಹನಗಳನ್ನು ಚಾಲನೆ ಮಾಡುವುದನ್ನು ಹೇಳಿಕೊಟ್ಟಿದ್ದರ ಪರಿಣಾಮದಿಂದಾಗಿ ಅವನಿಗಿಂತ ಹೆಚ್ಚಿನ ವಯಸ್ಸಿನವರೊಂದಿಗೆ ವ್ಯವಹರಿಸುವ ಅವಕಾಶ ಹೆಚ್ಚಾಗಿದ್ದಿರಬಹುದು. ಸಮವಯಸ್ಕರ ಜತೆಗಿನ ಒಡನಾಡಿತನ ಕಡಿಮೆಯಾಗಿ ಅವನಿಗಿಂತಲೂ ಹೆಚ್ಚಿನ ವಯಸ್ಸಿನವರು ಮತ್ತು ಸಮಾನ ಆಸಕ್ತಿ ಇರುವವರತ್ತ ಅವನ ಮನಸ್ಸು ಹರಿದಿರುವ ಸಾಧ್ಯತೆಗಳಿವೆ. ಹೀಗಾಗಿ ಕಳ್ಳತನ, ಸುಳ್ಳು ಹೇಳುವುದು ಮತ್ತು ಕಲಿಕೆಯ ಬಗ್ಗೆ ನಿರಾಸಕ್ತಿ ಹುಟ್ಟುವುದಕ್ಕೂ ಇಂತಹ ಪರಿಸರವೇ ಪ್ರೇರಣೆ. ಇದರೊಂದಿಗೆ ಹದಿಹರೆಯದ ಬದಲಾವಣೆಗಳು ಸಹ ಅವನ ದುಶ್ಚಟಗಳಿಗೆ ಉತ್ತೇಜನ ನೀಡಿರಬಹುದು. ಈಗ, ಇಂತಹ ಹುಡುಗನ ಮನಸ್ಸನ್ನು ಬದಲಾಯಿಸುವುದು ಹೇಗೆ? ಮತ್ತು ಅವನನ್ನು ಸರಿ ದಾರಿಗೆ ತರುವ ಕ್ರಮಗಳು ಯಾವುವು? ಎನ್ನುವುದನ್ನು ಕಂಡುಕೊಳ್ಳುವ ಅಗತ್ಯವಿದೆ. ನಿಮ್ಮ ಹುಡುಗನ ವಯಸ್ಸಿಗೆ ಮೀರಿದ ಚಟುವಟಿಕೆಗಳನ್ನು ನಿಯಂತ್ರಿಸುವುದರ ಮೊದಲ ಹಂತವೆಂದರೆ, ವಾಹನಗಳು ಅವನ ಕೈಗೆ ಸಿಗದಂತೆ ನೋಡಿಕೊಳ್ಳುವುದು. ಈ ವಿಷಯದಲ್ಲಿ ಪೊಲೀಸರ ಗಮನವನ್ನು ಸೆಳೆಯುವುದು ತಪ್ಪಲ್ಲ ಎನಿಸುತ್ತದೆ. ಏಕೆಂದರೆ ಇಂತಹದೊಂದು ಉತ್ಸಾಹ ಅದೆಷ್ಟು ಅಮಾಯಕರ ಜೀವಕ್ಕೆ ಹಾನಿ ಉಂಟುಮಾಡಬಲ್ಲದು. ಪರವಾನಗಿ ಇಲ್ಲದೇ ವಾಹನ ಚಲಾಯಿಸುವುದು ಅಪರಾಧ. ಈ ವಿಷಯವನ್ನು ಅವನ ಮನಸ್ಸಿಗೆ ಪರಿಣಾಮಕಾರಿಯಾಗಿ ಮಾಡುವಲ್ಲಿ ಪೊಲೀಸರು ಸಮರ್ಥರು. ಇದೇ ಕ್ರಮದಲ್ಲಿ ಅವನಲ್ಲಿ ಹುಟ್ಟಿಕೊಂಡಿರುವ ಕದಿಯುವ ಪ್ರವೃತ್ತಿಯನ್ನು ಸಹ ಅಪರಾಧದ ಸ್ವಭಾವ ಎಂದು ನೋಡಬೇಕಾಗುತ್ತದೆ. ಹಣ, ಮನೆಯಲ್ಲಿರುವ ಬೆಲೆಬಾಳುವ ವಸ್ತುಗಳನ್ನು ಕದಿಯುವಂತೆ ಪ್ರೇರಣೆ ನೀಡುವವರು ಹಿಂದೆ ಇದ್ದಾರೆ ಎನ್ನುವುದನ್ನು ಮರೆಯಬಾರದು. ಹೀಗಾಗಿ ನಿಮ್ಮ ಹುಡುಗನಲ್ಲಿ ಕಾಣಿಸಿಕೊಂಡಿರುವ ವರ್ತನೆಗಳು ಕೇವಲ ಮಾನಸಿಕ ದುಃಸ್ಥಿತಿ, ಸಮಸ್ಯೆಗಳಿಂದ ಹುಟ್ಟಿಕೊಂಡಿದೆ ಎನ್ನುವುದಕ್ಕಿಂತ ಅವನ ಸಂಗಡಿಗರು, ಸಹವಾಸ ಮತ್ತು ಅವನಿಗೆ ಲಭ್ಯವಿರುವ ಅವಕಾಶಗಳಿಂದ ಗಟ್ಟಿಯಾಗಿದೆ ಎನಿಸುತ್ತದೆ. ನಿಮ್ಮ ಮಗನನ್ನು ಸರಿದಾರಿಗೆ ತರಲು ಇವುಗಳತ್ತ ಗಮನ ಹರಿಸಬೇಕಾಗುತ್ತದೆ. ತಕ್ಷಣದಲ್ಲಿ ಅವನ ಅರಿವಿಗೆ ಬರಬೇಕಾಗಿರುವ ವಿಷಯವೆಂದರೆ, ಅಪರಾಧದಿಂದ ಅಪಾಯವೇ ಜಾಸ್ತಿ ಎನ್ನುವುದು. ಇದನ್ನು ಅವನ ಮನಸ್ಸಿಗೆ ನಾಟುವಂತೆ ಮಾಡುವವರಲ್ಲಿ, ಅವನು ಗೌರವಿಸುವ ಹಿರಿಯರು, ಆಪ್ತ ಗೆಳೆಯರು ಮತ್ತು ಕಾನೂನು ರಕ್ಷಕರು. ಆದುದರಿಂದ ಅಂತಹವರ ಸಹಾಯವನ್ನು ಪಡೆಯುವುದರತ್ತವೂ ಗಮನಹರಿಸಿ.

ನನ್ನ ಮಗ 8ನೇ ತರಗತಿಯಲ್ಲಿದ್ದಾನೆ. ಇಂಗ್ಲಿಷ್ ಮಾಧ್ಯಮದಲ್ಲಿ ಅಭ್ಯಾಸ ಮಾಡುತ್ತಿರುವ ಅವನಿಗೆ ಓದು ಬರಹದ ಸಮಸ್ಯೆ ಇಲ್ಲ. ಎಲ್ಲ ರೀತಿಯ ಚಟುವಟಿಕೆಗಳಲ್ಲಿಯೂ ಆಸಕ್ತಿ ಇದೆ. ಆದರೆ ಇತ್ತೀಚಿನ ಕೆಲ ದಿನಗಳಿಂದ ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು, ನಿದ್ದೆಯಿಂದ ಎದ್ದು ಚೀಟಾರನೇ ಚೀರುವುದು ಮಾಡುತ್ತಾನೆ. ಮಾರನೆಯ ದಿನ ಅವುಗಳ ಬಗ್ಗೆ ಮಾತಾಡಿದರೇ ಅಂತಹದ್ದು ಮಾಡಿದ್ದ ನೆನಪಿಲ್ಲ ಎನ್ನುತ್ತಾನೆ. ಒತ್ತಾಯ ಮಾಡುವುದಕ್ಕೆ ನನಗೆ ಮನಸ್ಸಿಲ್ಲ. ಆದರೆ, ಅವನ ಈ ಹೊಸ ವರ್ತನೆಯು ಏನನ್ನು ಸೂಚಿಸುತ್ತಿದೆ ಎನ್ನುವ ಕುತೂಹಲವಷ್ಟೇ ಅಲ್ಲದೆ ಇದರಿಂದ ಏನಾದರೂ ಅಪಾಯವಿದೆಯೇ ಎನ್ನುವ ಆತಂಕವು ಇದೆ. ದಯಮಾಡಿ ಈ ವರ್ತನೆಯನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎನ್ನುವುದನ್ನು ತಿಳಿಸಿಕೊಡಲು ಸಾಧ್ಯವೆ?

–ರುಕ್ಮಿಣಿ, ಬೆಂಗಳೂರು

ಹರೆಯದ ವಯಸ್ಸಿನಲ್ಲಿ ಕಾಣಿಸಿಕೊಳ್ಳುವ ಲಕ್ಷಣಗಳಿರಬಹುದು. ಅಸಹನೀಯ ಸನ್ನಿವೇಶಗಳು, ಗೆಳೆಯರೊಂದಿಗೆ ಘರ್ಷಣೆ, ಆತಂಕ ಮತ್ತು ಭಯದ ಅನುಭವಗಳು ಇಂತಹ ವರ್ತನೆಗಳ ಮೂಲಕ ಹೊರಬರಬಹುದು. ಇಂತಹ ವರ್ತನೆಗಳ ಬಗ್ಗೆ ಪ್ರಸ್ತಾಪ ಮಾಡಿದಾಗ ಅಪಮಾನದ ಭಾವವು ಸೂಕ್ಷ್ಮಗೊಳ್ಳಬಲ್ಲದು. ಇದರಿಂದಾಗಿ ನಿದ್ದೆಯಲ್ಲಿ ಚೀರಿದ ಬಗ್ಗೆ, ನಿದ್ದೆಯಲ್ಲಿ ಮೂತ್ರ ಮಾಡಿಕೊಂಡಿದ್ದರ ಬಗ್ಗೆ ನೆನಪಿಲ್ಲವೆಂದು ಹೇಳಿರಬಹುದು. ಮುಖ್ಯವಾಗಿ ಇದನ್ನು ದೊಡ್ಡ ಸಮಸ್ಯೆ ಎನ್ನುವುದಾಗಿ ತಕ್ಷಣದಲ್ಲಿ ಭಾವಿಸುವ ಅಗತ್ಯವಿಲ್ಲವೆನಿಸುತ್ತದೆ. ಅವನ ಗೆಳೆಯರ ಬಗ್ಗೆ, ಅವನ ಶಿಕ್ಷಕರ ಬಗ್ಗೆ ಅಥವಾ ವೀಕ್ಷಿಸಿದ ಚಿತ್ರ ಮತ್ತು ಈ ಸಮಯದಲ್ಲಿ ಸೋಲು, ನಿರಾಸೆಗಳ ಬಗ್ಗೆ ಮಾತಾಡಿದ್ದರೆ ಅವುಗಳನ್ನು ಎಚ್ಚರಿಕೆಯಿಂದ ಗಮನಿಸಿ. ಹದಿಹರೆಯದ ಗೆಳತನದ ಸಮಸ್ಯೆಗಳು ಅನೇಕ ಸಲ ಇಂತಹದೊಂದು ಪ್ರತಿಕ್ರಿಯೆಗೆ ಕಾರಣವಾಗಿರಬಲ್ಲದು. ಅದನ್ನು ತಿಳಿದುಕೊಳ್ಳುವಂತಹ ಸಾಹಸ ಬೇಡ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122**